ಅನಂತನೊಳಗೆ ಬಹಳ ದಿನಗಳ ತನಕ ನಿರಾಸೆ, ಬೇಸರ ಸತಾಯಿಸಿದವು.

ಅಪ್ಪಿಯ ಆಯ್ಕೆಯ ಗುಟ್ಟು ಬಯಲಾಗಲು ಬಹಳ ಕಾಲ ಬೇಕಾಗಲಿಲ್ಲ. ಮಾಸ್ತರಿಗೆ ಪಿಯಾನೊ ನುಡಿಸುವ ಹುಚ್ಚಿತ್ತು. ಹೆಗಡೆ ಜಾತ್ರೆಯಲ್ಲಿ ತಂಬು ಹಾಕಿದ್ದ ನಾಟಕ ಕಂಪನಿಯ ಗದುಗಿನ ಪುಣ್ಯಾಶ್ರಮದ ಕರಿ ಕನ್ನಡಕದ ಕುರುಡು ಕಲಾವಿದನ ಪರಿಚಯವಾಗಿ ಅವನು ಸ್ವರ ಪೆಟ್ಟಿಗೆಯನ್ನು ಮಾಸ್ತರಿಗೆ ಕೊಟ್ಟು ಹೋಗಿದ್ದ; ಮಾಸ್ತರು ಮನೆಗೆ ಬಂದಾಗಲೆಲ್ಲ ಮುಸ್ಸಂಜೆ ಹೊತ್ತು ನುಡಿಸುತ್ತಿದ್ದರು; ಕೆಲವೊಮ್ಮೆ ದೇವಸ್ಥಾನದ ಅಹೋರಾತ್ರಿ ಭಜನೆಗೆ ಒಯ್ಯುತ್ತಿದ್ದರು. ಈ ಪಿಯಾನೋಗೆ ಮಿರ್ಜಾನಿನ ರಾಯ್ಕರ ಗಣಪತಿ ಗಂಟು ಬಿದ್ದ. ಅವನ ಅಣ್ಣ ಮನೆಯಲ್ಲಿ ಅಕ್ಕಸಾಲಿ ಕೆಲಸ ಮಾಡುತ್ತಿದ್ದ. ಅಪ್ಪಿಯ ಕರಿಮಣಿ ಸರ ಸುರಿದವನು ರಾಯ್ಕರನೇ. ಹೆಗಡೆ ಜಾತ್ರೆಯಲ್ಲಿ ರಾಯ್ಕರ ಅಪ್ಪಿಯ ಕೈಗೆ ಒಂದು ಡಝುನ್ ಬಳೆ ತುಂಬಿಸಿದ್ದನ್ನು ಕೇರಿಯ ಬಜಾರಿಯೊಬ್ಬಳು ನೋಡಿ ಡಂಗುರ ಸಾರಿದ್ದಳು; ಕಾಲುಂಗುರ ಕೊಡಲು ಬಂದಾಗೊಮ್ಮೆ ಮಂಚದಡಿಯಲ್ಲಿದ್ದ ಪಿಯಾನೊ ಅವನ ಕಣ್ಣಿಗೆ ಬಿತ್ತು. "ಬಾರಿಸದಿದ್ದರೆ ಹಾಳಾಗ್ತದೆ" ಎನ್ನುತ್ತ ಜಗಲಿಯಲ್ಲಿ ಕೂತು ಸ್ವಲ್ಪ ಹೊತ್ತು ಬಾರಿಸಿ ಹೋಗುತ್ತಿದ್ದ. ಅವನ ನೋಡಿದವರು ಎಲ್ಲರೂ 'ಬೆಂಕಿಯ ಬಲೆ' ಚಿತ್ರದ ಅನಂತ ನಾಗನ ಹಾಗೆ ಕಾಣಿಸುತ್ತಾನೆ ಎನ್ನುತ್ತಿದ್ದರು. ಅನಂತನಿಗೂ ಹಾಗೇ ಅನಿಸಿತ್ತು. ಅವನ ಅಣ್ಣ ದಾವಣಗೆರೆಯಲ್ಲಿ ಅಂಗಡಿ ತೆರೆದು ತಮ್ಮ ಗಣಪತಿಗೂ ಬರಲು ಒತ್ತಾಯಿಸಿದ. ಗಣಪತಿ ಹೋಗಲೇ ಇಲ್ಲ. "ಊರು ಬಿಟ್ರೆ ನನಗೆ ಆ ಹವೆ ಪಾಡಸೂದಿಲ್ರಾ" ಎನ್ನುತ್ತ ಮನೆಯಲ್ಲೇ ಉಳಿದ. ಕಾಮೇಶ್ವರ ದೇವಸ್ಥಾನದ ಕಡೇಗೆ ಆಗಿಬಿಡುತ್ತಿದ್ದ. ವಾರದಲ್ಲಿ ಒಂದೆರಡು ರಾತ್ರಿ ದೇವಸ್ಥಾನದಲ್ಲೇ ಉಳಿದಿಬಿಡುತ್ತಿದ್ದ. 'ರಾಯ್ಕರ ಗಣಪತಿ ಯಾವಾಗ್ಲೂ ಕಾಮೇಶ್ವರನ ಮನೆಯಲ್ಲಿ ಇರ್ತಾನಪ್ಪ' ಎಂದು ಊರವರು ಆಡಿಕೊಂಡರು.




'ಅಪ್ಪಿಗೆ ಅಂವ ಗಂಟು ಬಿದ್ದದ್ದು ಹೌದು' ಎಂಬ ಮಾತಿನ ಹಿಂದೆಯೇ ಮಾಸ್ತರು, ಗಣಪತಿ ಮತ್ತು ಅಪ್ಪಿಗೆ ಬುದ್ಧಿ ಹೇಳಿ ನೋಡಿದರು; ಒತ್ತಾಯ ಅತಿಯಾದಾಗ, "ಗಣಪತಿಗೆ ತೊಂದ್ರೆ ಆದ್ರೆ ನಾನು ಜೀವಸಹಿತ ಇರೋದಿಲ್ಲ; ಅಂವ ನನ್ನ ಸಲುವಾಗಿ ಮದ್ವೆ ಆಗೋದಿಲ್ಲಾಂತ ಅಮ್ನೋರು ದೇವಸ್ಥಾನದಲ್ಲಿ ಆಣೆ ಮಾಡಿದ್ದಾನೆ" ಎಂದು ಬಿಟ್ಟಳು. ಪಾಚಣ್ಣನಿಗೆ ಅಕ್ಕು ನಿಕ್ಕಿಯಾಗುವ ಸುದ್ದಿ ಕೇಳುತ್ತಲೆ ತಾರಿ ದಾಟಿ ಬಂದ ಅಪ್ಪಿ, "ಆ ಮುದುಕನ ಸಂಗಡ ಸಂಸಾರ ಮಾಡುಕ್ಕಿಂತ ನಿನ್ನ ಪ್ರೀತಿಸಿದವರ ಜತೆ ಓಡಿ ಹೋಗು" ಎಂದು ಎಲ್ಲರ ಸಮಕ್ಷಮ ಅಕ್ಕುಗೆ ಹೇಳಿ ಬಂದಿದ್ದಳು.

ದತ್ತು ನೆನಪಾದಾಗಲೆಲ್ಲ ಅನಂತನಿಗೆ ಮಾಸ್ತರ ಮೊದಲ ತಿಥಿಯೂಟದ ಅಪರಾಹ್ನ ನಡೆದ ಘಟನೆ ಕಣ್ಮುಂದೆ ಬರುತ್ತದೆ: ಮಾಸ್ತರು ತೀರಿದ ನಂತರ ತನ್ನ ಹಿರಿ ಅಳಿಯತನದ ಅಧಿಕಾರವನ್ನು